**(ಇಂದು ದಿನಾಂಕ 29-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ**

ನಾನು ಬಿಕಾಂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಎಮ್ ಬಿ ಎ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ವಾದಿ ಬಿ ಬಿ ಟಿ ಎಮ್ ಪದವಿ ಹೊಂದಿರುತ್ತಾಳೆ. 3 ನೇ ವಾದಿ ಪಿಯುಸಿ ಓದಿರುತ್ತಾಳೆ. ನನ್ನ ತಂದೆ ಸುಮಾರು 2012 ರಿಂದ ಕಿಡ್ನಿ ಮತ್ತು ಲಿವರ್ ಕಾಯಿಲೆ ಇಂದ ಬಳಲುತಿದ್ದರು ಎಂದರೆ ಸರಿ. ನನ್ನ ತಂದೆ ಇವತ್ತಿನ ವರೆಗೆ ಜಂಬಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮೊದಲು ಪಡೆಯುತಿದ್ದರು ಎನ್ನುತ್ತಾರೆ. ದಾವಾ ಆಸ್ತಿ ವಣಬೇಸಾಯ ಜಮೀನು ಎಂದರೆ ಸರಿ. ನಮ್ಮ ಮನೆತನದ ವ್ಯವಹಾರವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಜೀವಂತ ಇರುತ್ತಾರೆ. ನನ್ನ ತಾಯಿಯನ್ನು ಈ ದಾವೆಗೆ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. 3 ನೇ ವಾದಿಗೆ ನನ್ನ ತಾಯಿಯನ್ನು ಏಕೆ ಸಂರಕ್ಷಗಾರಳನ್ನಾಗಿ ಮಾಡಿರುವುದಿಲ್ಲ ಎಂದು ಗೊತ್ತಿರುವುದಿಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ನನ್ನ ತಾಯಿಯ ಸಮ್ಮತಿ ಮೇರೆಗೆ ದಿಃ 02-12-2015 ರಂದು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಮಾರಾಟ ಮಾಡುವ ಸಮಯದಲ್ಲಿ ನಾವು ಅಪ್ರಾಪ್ತರಾಗಿದ್ದೇವು ಎಂದರೆ ಸರಿ. ನನ್ನ ತಾಯಿ ದಾವಾ ಆಸ್ತಿ ಮಾರಲು ಆಕೆ ಪರವಾಗಿ ಮತ್ತು ನಮ್ಮ ಪರವಾಗಿ ಸಮ್ಮತಿ ನೀಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ನನ್ನ ತಾಯಿ ನಮ್ಮ ಪರವಾಗಿ ಮಾರಾಟ ಮಾಡುವ ವಿಷಯ ಗೊತ್ತಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ 2 ನೇ ಪ್ರತಿವಾದಿಯಿಂದ ದಾವಾ ಆಸ್ತಿ ಮಾರುವ ಮೊದಲು ತುಂಬಾ ಹಣ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಮಾರಾಟದ ಹಣ ಚೆಕ್ ಮುಖಾಂತರ ನನ್ನ ತಂದೆಗೆ ಸಂದಾಯ ವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ನಮ್ಮ ಮನೆತನದ ಅವಶ್ಯಕತೆಗಾಗಿ ಹಾಗೂ ನಮ್ಮ ವಿದ್ಯಾಭ್ಯಾಸದ ಖರ್ಚಿಗಾಗಿ ಹಾಗೂ ತನ್ನ ವೈದ್ಯಕೀಯ

ಚಿಕಿತ್ಸೆಗೆ ದಾವಾ ಆಸ್ತಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮಾರಾಟ ಮಾಡುವ ವಿಷಯ ನನಗೆ ಸಂಪೂರ್ಣವಾಗಿ ಗೊತ್ತಿರುತ್ತದೆ ಆದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ 21 ವರ್ಷ ವಯಸ್ಸು. ದಾವೆ ದಾಖಲಿಸುವ ಕಾಲಕ್ಕೆ ನಾನು ಪ್ರಾಪ್ತ ವಯಸ್ಕಳಾಗಿದ್ದೆನು ಎಂದರೆ ಸರಿ. ನನಗೆ ಸಪ್ಟೇಂಬರ್ 2023 ರಲ್ಲಿ ದಾವಾ ಆಸ್ತಿ ಮಾರಾಟದ ವಿಷಯ ಗೊತ್ತಾದ ಕಾರಣ ಈ ದಾವೆ ದಾಖಲಿಸಿರುತ್ತೇನೆ. ದಾವಾ ಆಸ್ತಿ ಮಾರಾಟ ಮಾಡುವ ಕಾಲಕ್ಕೆ ನನಗೆ ಮಾರಾಟದ ವಿಷಯ ಗೊತ್ತಿತ್ತು ಮತ್ತು ಆ ವಿಷಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಡಿಗೆ ಎನ್ನುವ ವ್ಯಕ್ತಿ ಈ ಮನೆತನದ ಹಿರೆತನ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರಿಗೆ ಉದ್ಯೋಗ ಇರಲಿಲ್ಲ ಎಂದರೆ ಸರಿ. ನಿ.ಪಿ.27 ರಲ್ಲಿ ನನ್ನ ತಾಯಿಯ ಸಹಿ ಇದೆ ಎಂದರೆ ಸರಿ. ದಾವಾ ಆಸ್ತಿ ಮಾರಾಟದ ವಿಷಯ ನನಗೆ ಗೊತ್ತಿದ್ದ ಕಾರಣ ನಮ್ಮ ಮೇಲೆ ಬಂದನಕಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ದಾಖಲೆಸಲು ಯಾವುದೇ ದಾಖಲೆ ಯಾವುದೇ ವಾಜ್ಯ ಕಾರಣಗಳು ಇರುವುದಿಲ್ಲ ಆದರೂ ನನ್ನ ತಂದೆ ತಾಯಿ ನಮ್ಮ ಮೂಲಕ ಈ ಖೊಟ್ಟಿ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿ 3 ರಿಂದ 13 ನೇ ಪ್ರತಿವಾದಿಗೆ ಮಾರಾಟ ಮಾಡಿದ ಖರೀದಿ ಪತ್ರಗಳು ನಮಗೆ ಭಂದನಕಾರಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 13 ರವರಿಂದ ಹಣ ಪಡೆಯಬೇಕೆಂದು ದೂರುದೇಶದಿಂದ ಈ ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಪಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.